ಸಾಕ್ಷಿಯನ್ನು ದಿನಾಂಕ 07.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ಮತ್ತು 3ನೇ ವಾದಿ ಪರ ಶ್ರೀ ಬಿ.ಎಸ್. ವಕೀಲರಿಂದಃ**

ನಿಡಿ-5 ಕ್ರಯ ಪತ್ರ ದಿಃ 06.04.2018 ರಂದು ಬರೆದಿದ್ದರು ದಿಃ 28.10.2020 ರಂದು ನೋಂದಣಿಯಾಗಿರುತ್ತದೆ ಎಂದರೆ ಸರಿ. ನಿಡಿ-6 ಕ್ರಯ ಪತ್ರವನ್ನು ನಮ್ಮ ವಕೀಲರು ತಯಾರಿಸಿರುತ್ತಾರೆ. ನಮ್ಮ ವಕೀಲರು ನಿಡಿ-6 ರ ಕ್ರಯ ಪತ್ರ ಆಗುವ ಪೂರ್ವದಲ್ಲಿ ಈ ದಾವೆಯಲ್ಲಿ ಪ್ರತಿವಾದಿ 8 ರಿಂದ 10 ರವರ ಪರವಾಗಿ ಹಾಜರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಕ್ರಯಕ್ಕೆ ತೆಗೆದುಕೊಳ್ಳುವ ಪೂರ್ವದಲ್ಲಿ ಯಾರಿಂದಲಾದರೂ ಕ್ರಯಕ್ಕೆ ಪಡೆಯುವ ಬಗ್ಗೆ ಒಪ್ಪಿಗೆಯನ್ನು ಪಡೆದಿದ್ದೀರಾ ಎಂದರೆ ಸಾಕ್ಷಿಯು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದೆಹಲಿ ನ್ಯಾಯಾಲಯದಲ್ಲಿ ಪ್ರಕರಣಗಳು ಇದ್ದವು, ಅವು ತೀರ್ಮಾನವಾದ ನಂತರ ನಾನು ಕ್ರಯಕ್ಕೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಮೂಲ ವಾದಿಯಾದ ಜ್ಯೋತಿ ರವರು ದಾಖಲುಪಡಿಸಿದ ಸಂಧರ್ಭದಲ್ಲಿ ನಾನು ಖರೀದಿಸಿದ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರಲಿಲ್ಲ ಎಂದರೆ ಸರಿ. ಮೂಲ ವಾದಿಯಾದ ಜ್ಯೋತಿ ರವರು ನಾನು ಖರೀದಿಸಿರುವ ಆಸ್ತಿಯನ್ನು ಸಹ ದಾವೆಯಲ್ಲಿ ಸೇರ್ಪಡಿಸಬೇಕೆಂದು ಅರ್ಜಿ ದಾಖಲಿಸಿದ್ದರು ಆ ಸಮಯದಲ್ಲಿ ಪ್ರತಿವಾದಿ 8 ರಿಂದ 10 ನೇ ರವರ ಪರ ವಕೀಲರಿಗೆ ಆ ಅರ್ಜಿಯ ನಕಲನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ವಕೀಲರ ಮೂಲಕ ನನಗೆ ವಿಷಯ ತಿಳಿದಿತ್ತು ಎಂದರೆ ಸರಿಯಲ್ಲ. ನಮ್ಮ ವಕೀಲರು ನಾನು ಖರೀದಿಸಿದ ಆಸ್ತಿಯನ್ನು ದಾವೆಯಲ್ಲಿ ಸೇರ್ಪಡೆ ಮಾಡಲು ಅರ್ಜಿ ಹಾಕಿರುವ ವಿಷಯವನ್ನು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ನಮ್ಮ ವಕೀಲರು ಆ ವಿಷಯವನ್ನು ತಿಳಿಸಿದ್ದರೂ ಸಹ ನಾನು ನಿಡಿ-6 ರ ಪ್ರಕಾರ ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ-1 ರ ಪ್ರಕಾರ ದಿಃ 06.12.2005 ರಂದು ದೊಡ್ಡಸುಬ್ಬಪ್ಪನವರ ಮಕ್ಕಳಾದ ನಾಗಪ್ಪ, ನಂಜಪ್ಪ, ಮಾದಪ್ಪ, ಮಹೇಶ ಮತ್ತು ಲೇಟ್ ಚಿಕ್ಕಸುಬ್ಬಪ್ಪ ನವರ ಮಗ ಬಸವರಾಜಪ್ಪ ಮತ್ತು ಶಂಕ್ರಪ್ಪನ ಮೈನರ್ ಮಕ್ಕಳಾದ ಕಾತ್ಯಾಯಿನಿ ಮತ್ತು ಸುಜಾತ ಮತ್ತು ನಾಗಪ್ಪನ ಮೈನರ್ ಮಕ್ಕಳಾದ ಗಜೇಂದ್ರ ಮತ್ತು ನಂದಕುಮಾರ ಮತ್ತು ಸಣ್ಣಪ್ಪನ ಮಗಳು ಚೆನ್ನಮ್ಮ ಇವರೆಲ್ಲರೂ ಸೇರಿ ಕೆ.ಆರ್.ಮಣಿ ರವರಿಗೆ ಕ್ರಯಕ್ಕೆ ನೀಡಿರುತ್ತಾರೆಂದು ಇರುತ್ತದೆ ಎಂದರೆ ಸರಿ. ನಿಡಿ-1 ಕ್ರಯಪತ್ರವನು ಮಾಡುವ ಸಮಯದಲ್ಲಿ ವಾದಿ 2 ಮತ್ತು 3 ನೇ ರವರನ್ನು ಅದರಲ್ಲಿ ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದು ನನಗೆ ಗೊತ್ತಿಲ್ಲ.

ನನಗೆ ನನ್ನ ದೇಶದ ಮತ್ತು ರಾಜ್ಯದ ಕಾನೂನಿನ ಬಗ್ಗೆ ಅರಿವು ಇದೆ ಎಂದರೆ ಸರಿ. 2005 ನೇ ಇಸವಿಯಲ್ಲಿ Hindu Seccession Act ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ತಿದ್ದುಪಡಿ ಪ್ರಕಾರ ಹೆಣ್ಣು ಮಕ್ಕಳಿಗೂ ಸಹ ಗಂಡು ಮಕ್ಕಳಷ್ಟೆ ಹಕ್ಕು ಇರುತ್ತದೆ ಎಂದು ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ನಾನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ದೊಡ್ಡಸುಬ್ಬಪ್ಪ ನವರಿಗೆ ಎಷ್ಟು ಜನ ಮಕ್ಕಳು ಎಂಬ ಬಗ್ಗೆ ತಿಳಿದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನಗಿಂತ ಪೂರ್ವದಲ್ಲಿ ಮೂರು ಜನರು ನೋಂದಣಿ ಕ್ರಯ ಪತ್ರ ಮಾಡಿಕೊಂಡಿದ್ದರಿಂದ ಆ ಬಗ್ಗೆ ವಿಚಾರಣೆ ಮಾಡಲು ಹೋಗಿರುವುದಿಲ್ಲ. ದಿಃ 20.12.2004 ರ ನಂತರ ಆದ ಯಾವುದೇ ಕ್ರಯ ಪತ್ರಗಳು ಹೆಣ್ಣು ಮಕ್ಕಳ ಹಕ್ಕನ್ನು ಭದ್ರಪಡಿಸುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನನ್ನು ಈ ದಾವೆಯಲ್ಲಿ ಪ್ರತಿವಾದಿಯನ್ನಾಗಿ ಸೇರ್ಪಡೆಗೊಳಿಸಿದ ನಂತರ ಲಿಖಿತ ಹೇಳಿಕೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಡಿ-1 ರ ಪ್ರಕಾರ ನಂಜಪ್ಪ ಮತ್ತು ಬಸವರಾಜಪ್ಪ ನವರಿಗೆ ಜಂಟಿಯಾಗಿ 2 ಎಕರೆ 21 ಗುಂಟೆ ಜಮೀನು ಇತ್ತು ಎಂದರೆ ನಾನು ಆ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ.

ನಿಡಿ-2 ರಿಂದ ನಿಡಿ-5 ರವರೆಗಿನ ಕ್ರಯ ಪತ್ರಗಳು ದಾವಾ ಐಟಂ ನಂ. 1 ಮತ್ತು 2ನೇ ಸ್ವತ್ತುಗಳಿಗೆ ಸಂಬಂಧಿಸಿದವುಗಳು ಎಂದರೆ ಸರಿ. ಸದರಿ ದಾಖಲೆಗಳನ್ನು ಯಾವ ಕಾರಣಕ್ಕೆ ಈ ದಾವೆಯಲ್ಲಿ ಹಾಜರುಪಡಿಸಿರುತ್ತೀರಿ

ಎಂದರೆ ಸಾಕ್ಷಿಯು ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ನಾನು ಕ್ರಯದ ಕರಾರು ಪತ್ರಗಳನ್ನು ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸದರಿ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಜಿಲ್ಲಾ ನ್ಯಾಯಾಲಯದಲ್ಲಿ ನಡೆದಿರುವ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ದಾವಾ ಸ್ವತ್ತುಗಳನ್ನು ಮಾರಾಟ ಮಾಡಬಾರದೆಂದು ಆದೇಶವಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ನಾನು 2021 ನೇ ಇಸವಿಯಲ್ಲಿ ಕ್ರಯದ ಕರಾರು ಪತ್ರ ಮಾಡಿಕೊಂಡಿದ್ದೆ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ. 1 ರಿಂದ 3 ಮತ್ತು ದಾವಾ ಐಟಂ ನಂ. 4ನೇ ಸ್ವತ್ತಾದ ಸರ್ವೆ ನಂ. 337 ಒಟ್ಟು ಕ್ಷೇತ್ರ 4 ಎಕರೆ 1 ಗುಂಟೆ ಪೈಕಿ ದೊಡ್ಡಸುಬ್ಬಪ್ಪನಿಗೆ 1 ಎಕರೆ 10.08 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 4 ನೇ ಸ್ವತ್ತಿಗೆ ಸಂಬಂಧಿಸಿದಂತೆ ದಿಃ 06.12.2005 ರ ಕ್ರಯ ಪತ್ರಕ್ಕೆ ವಾದಿ 2 ಮತ್ತು 3 ನೇ ರವರು ಸಹಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 337 ರಲ್ಲಿ ದೊಡ್ಡಸುಬ್ಬಪ್ಪನಿಗೆ ಇದ್ದ 1 ಎಕರೆ 10.08 ಗುಂಟೆ ಜಮೀನಿನಲ್ಲಿ ವಾದಿಗಳಿಗೂ ಸಹ ತಲಾ 1/6 ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ಮತ್ತು 2 ರಲ್ಲೂ ಸಹ ವಾದಿಗಳಿಗೆ ದೊಡ್ಡಸುಬ್ಬಪ್ಪನಿಗೆ ಬರತಕ್ಕ ಹಿಸ್ಸೆಯಲ್ಲಿ ತಲಾ 1/6 ಹಿಸ್ಸೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ಮತ್ತು 2 ನೇ ಸ್ವತ್ತಿಗೆ ಸಂಬಂಧಿಸಿದಂತೆ ಕಾನೂನು ಬಾಹಿರವಾಗಿ ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಜಿಲ್ಲಾ ನ್ಯಾಯಾಲಯದಲ್ಲಿ ಯಾವ ದಿನಾಂಕದಂದು ದಾವೆ ದಾಖಲುಪಡಿಸಿರುತ್ತೇನೆ ಎಂದು ನನಗೆ ಈಗ ನೆನಪಿರುವುದಿಲ್ಲ. ನಿಡಿ-13 ರಿಂದ 133 ದಾಖಲೆಗಳ ಪೈಕಿ ನಿಡಿ-22 ರಿಂದ 36 ನೇದ್ದವುಗಳನ್ನು ಹೊರತುಪಡಿಸಿ ಉಳಿದ ದಾಖಲೆಗಳು ನನಗೆ ಸಹಾಯಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಹಾಜರಾದ ನಂತರ ಜಿಲ್ಲಾ ನ್ಯಾಯಾಲಯದಲ್ಲಿ ಕ್ರಯದ ಕರಾರು ಪತ್ರದ ಮೇಲೆ ದಾವೆ ದಾಖಲುಪಡಿಸಿರುತ್ತೇನೆ ಎಂದರೆ ಸರಿ. ನಾನು ಮತ್ತು ಕಮಲೇಶ್ ಕುಮಾರ್ ರವರು ಈ ದಾವೆ ಚಾಲ್ತಿಯಲ್ಲಿ ಇದ್ದರೂ ಸಹ ವಾದಿಯರಿಗೆ ನಷ್ಟ ಉಂಟು ಮಾಡಬೇಕೆಂದು ಜಿಲ್ಲಾ ನ್ಯಾಯಾಲಯದಲ್ಲಿ ದಾವೆ ದಾಖಲುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್

ಗುಂಡ್ಲುಪೇಟೆ